# ನಗರಸಭಾ ಕಾರ್ಯಾಲಯ, ಶಿರಸಿ (ಉ.ಕ.)

ಸಂ. ನಸಶಿ/ತೆರಿಗೆ/ಮ.ಲೈ./ಟೆಂಡರು/ವಿವ–1/2008-09 ದಿನಾಂಕ: 02.06.2008.

## ಮಳಿಗೆಗಳ ಅಲ್ಪಾವಧಿ ಟೆಂಡರು–ಕಂ–ಹರಾಜು ಪ್ರಕಟಣೆ –2ನೇ ಕರೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಸಿ.ಟಿ.ಎಸ್. ಸಂ. 975 & 976 ರಲ್ಲಿಯ 10ನೇ ಹಣಕಾಸು ಯೋಜನೆಯಡಿಯಲ್ಲಿ ಕಟ್ಟಿದ ಅಂಗಡಿ ಸಂಕೀರ್ಣದ ಮೊದಲನೇ ಮಹಡಿಯಲ್ಲಿರುವ ಈ ಕೆಳಗಿನ 22 ಅಂಗಡಿಗಳನ್ನು ಲೈಸನ್ಸ್ ಆಧಾರದ ಮೇಲೆ 20 ವರ್ಷಗಳ ಅವಧಿಗಾಗಿ ಟೆಂಡರು–ಕಂ–ಹರಾಜು ಮೂಲಕ ವಿಲೇವಾರಿ ಮಾಡಲು ತೀರ್ಮಾನಿಸಲಾಗಿದೆ. ಮಳಿಗೆಗಳನ್ನು ಪಡೆಯಲಿಚ್ಛಿಸುವವರು ಒಂದು ದಿನ ಮುಂಚಿತವಾಗಿ ಫಾರ್ಮಗಾಗಿ ಲಿಖಿತ ಅರ್ಜಿಯನ್ನು ನೀಡಿ ಟೆಂಡರು ಫಾರ್ಮ ಪಡೆದು ದಿನಾಂಕ: 18-06-2008 ರಂದು ಬೆಳಿಗ್ಗೆ: 11:00 ಗಂಟೆಗೆ ಕಟ್ಟಡದ ಸ್ಥಳದಲ್ಲಿ ಜರುಗಲಿರುವ ಬಹಿರಂಗ ಹರಾಜು ಕಂ ಟೆಂಡರು ಪ್ರಕ್ರಿಯೆಲ್ಲಿ ಭಾಗವಹಿಸಿ ವಾಣಿಜ್ಯ ಮಳಿಗೆಯ ಸ್ಟಾಲ್‌ಗಳನ್ನು ಪಡೆಯಬಹುದಾಗಿದೆ. ಹೆಚ್ಚಿನ ಮಾಹತಿಗಾಗಿ ಕಛೇರಿ ಚಾಲೂ ಇರುವ ಸಮಯದಲ್ಲಿ ನಗರಸಭೆಗೆ ಬಂದು ತಿಳಿದುಕೊಳ್ಳಬಹುದು. ಇಲ್ಲವೆ ದೂರವಾಣಿ ಸಂಖ್ಯೆ 08384-226338ನೇದಕ್ಕೆ ಸಂಪರ್ಕಿಸಬಹುದು. ನಗರಸಭೆಯ ವೆಬ್ ಸೈಟ್ www.sirsicity.gov.in ದಲ್ಲಿ ಸಂಪೂರ್ಣ ಮಾಹಿತಿ ಲಭ್ಯವಿರುತ್ತದೆ.

**ಅಂಗಡಿ ಮಳಿಗೆಗಳ ವಿವರ:**

| ಅ.ಸಂ. | ಮಳಿಗೆಗಳ ವಿವರ (ಮೊದಲನೆ ಮಹಡಿಯಲ್ಲಿಯ ಸ್ಟಾಲ್‌ಗಳು) | ಮಳಿಗೆಗಳ ಸಂಖ್ಯೆ | ಮಳಿಗೆ ಅಳತೆ (ಮೀ. ಗಳಲ್ಲಿ) | ಮರುಪಾವತಿ ಯಿಲ್ಲದ ಕನಿಷ್ಠ ಪ್ರಿಮೀಯಂ | ಪ್ರತಿ ತಿಂಗಳ ಲೈಸನ್ಸ್ ಫೀ (ರೂ. ಗಳಲ್ಲಿ) |
|---|---|---|---|---|---|
| 1 | ವಾಣಿಜ್ಯ ಮಳಿಗೆ ಸಂಖ್ಯೆ 2 ರಿಂದ 10 ರವರೆಗೆ (ಹಾಲಿ ಚಾಲ್ತಿಯಲ್ಲಿರುವ ಐ.ಡಿ.ಎಸ್.ಎಮ್.ಟಿ. ಮಳಿಗೆಗಳ ಮೇಲೆ) | 09 ಅಂಗಡಿಗಳು | 3.00 x 5.40 Mtr. | 1,50,000-00 | 1,400-00 |
| 2 | ವಾಣಿಜ್ಯ ಮಳಿಗೆ ಸಂಖ್ಯೆ 11 ರಿಂದ 19 (ಹಾಲಿ ಚಾಲ್ತಿಯಲ್ಲಿರುವ ಐ.ಡಿ.ಎಸ್.ಎಮ್.ಟಿ. ಮಳಿಗೆಗಳ ಮೇಲೆ) | 09 ಅಂಗಡಿಗಳು | 3.00 x 5.40 Mtr. | 1,00,000-00 | 1,400-00 |
| 3 | ವಾಣಿಜ್ಯ ಮಳಿಗೆ ಸಂಖ್ಯೆ 01 (ಹಾಲಿ ಚಾಲ್ತಿಯಲ್ಲಿರುವ ಐ.ಡಿ.ಎಸ್.ಎಮ್.ಟಿ. ಮಳಿಗೆಗಳ ಮೇಲೆ) | 01 ಅಂಗಡಿ | 2.70 x 3.00 Mtr. | 80,000-00 | 700-00 |
| 4 | ವಾಣಿಜ್ಯ ಮಳಿಗೆ ಸಂಖ್ಯೆ 20 (ಹಾಲಿ ಚಾಲ್ತಿಯಲ್ಲಿರುವ ಐ.ಡಿ.ಎಸ್.ಎಮ್.ಟಿ. ಮಳಿಗೆಗಳ ಮೇಲೆ) | 01 ಅಂಗಡಿ | 2.70 x 3.00 Mtr. | 70,000-00 | 650-00 |
| 5 | ವಾಣಿಜ್ಯ ಮಳಿಗೆ ಸಂಖ್ಯೆ 21 (ಹಾಲಿ ಚಾಲ್ತಿಯಲ್ಲಿರುವ ಐ.ಡಿ.ಎಸ್.ಎಮ್.ಟಿ. ಮಳಿಗೆಗಳ ಮೇಲೆ) | 01 ಅಂಗಡಿ | 2.50 x 3.00 Mtr. | 65,000-00 | 600-00 |
| 6 | ವಾಣಿಜ್ಯ ಮಳಿಗೆ ಸಂಖ್ಯೆ 22 (ಹಾಲಿ ಚಾಲ್ತಿಯಲ್ಲಿರುವ ಐ.ಡಿ.ಎಸ್.ಎಮ್.ಟಿ. ಮಳಿಗೆಗಳ ಮೇಲೆ) | 01 ಅಂಗಡಿ | 2.50 x 3.00 Mtr. | 70,000-00 | 650-00 |



PDF Created with deskPDF PDF Writer - Trial :: http://www.docudesk.com

## ಕಾದಿಟ್ಟ ಮಳಿಗೆಗಳ ವಿವರ:-

| | | |
|---|---|---|
| 1. ಪರಿಶಿಷ್ಟ ಜಾತಿಯವರಿಗೆ | : ಮಳಿಗೆ ನಂ. 1,14,17 | : ಒಟ್ಟೂ 3 ಮಳಿಗೆಗಳು. |
| 2. ಪರಿಶಿಷ್ಟ ಪಂಗಡದವರಿಗೆ | : ಮಳಿಗೆ ನಂ. 13 | : ಒಟ್ಟೂ 1 ಮಳಿಗೆಗಳು. |
| 3. ಅಂಗವಿಕಲರಿಗೆ | : ಮಳಿಗೆ ನಂ. 22 | : ಒಟ್ಟೂ 1 ಮಳಿಗೆ. |
| 4. ಸ್ತ್ರೀ ಶಕ್ತಿ ಮಹಿಳಾ ಸಂಘಗಳಿಗೆ | : 09 ಮತ್ತು 21 | : ಒಟ್ಟೂ 2 ಮಳಿಗೆಗಳು. |

## ಟೆಂಡರು ಪ್ರಕ್ರಿಯೆಯ ವೇಳಾ ಪಟ್ಟಿ:

1. ಟೆಂಡರು ಫಾರ್ಮ ಪಡೆಯಲು ಅರ್ಜಿ ಕೊಡಲು ಕೊನೆಯ ದಿನಾಂಕ: 17.06.2008. ಸಂಜೆ: 3:30 ಗಂಟೆಯೊಳಗೆ.

2. ಖಾಲಿ ಟೆಂಡರ್ ಫಾರ್ಮ ಕೊಡಲು ಕೊನೆಯ ದಿನಾಂಕ: 17.06.2008, ಸಂಜೆ: 5:30 ಗಂಟೆಯೊಳಗೆ.

3. ಭರ್ತಿ ಮಾಡಿದ ಟೆಂಡರ್ ಫಾರ್ಮ ಸಲ್ಲಿಸಲು ಕೊನೆಯ ದಿನಾಂಕ: 18.06.2008, ಬೆಳಿಗ್ಗೆ: 10:45 ಗಂಟೆಯವರೆಗೆ.

4. ಖಾಲಿ ಟೆಂಡರ್ ಫಾರ್ಮ ಬೆಲೆ ರೂ. 100-00.

## ಶರತ್ತುಗಳು:-

1. ಟೆಂಡರು ಹಾಗೂ ಬಹಿರಂಗ ಹರಾಜನ್ನು ಮರುಪಾವತಿಯಿಲ್ಲದ ಠೇವಣಿ ಹಣದ ಮೇಲೆ ಅಂದರೆ ಮರು-ಪಾವತಿಯಿಲ್ಲದ ಪ್ರೀಮಿಯಂ ಹಣದ ಮೇಲೆ ಮಾಡಲಾಗುವುದು.

2. ಅರ್ಜಿ ಫಾರ್ಮಿನ ಪಕ್ಕ ಪ್ರತಿಯನ್ನು (ಕೌಂಟರ್ ಫಾಯಿಲ್) ಪಡೆದು ಕಾದಿಟ್ಟ ಮಳಿಗೆ ಬಿಟ್ಟು ಎಲ್ಲ ಮಳಿಗೆಗಳಿಗೆ ಟೆಂಡರು ಹಾಗೂ ಹರಾಜಿನಲ್ಲಿ ಭಾಗವಹಿಸಲು ಅರ್ಹರಿರುತ್ತಾರೆ.

3. ಅಂಗಡಿ ಕಬ್ಜಾ ಪಡೆದು ಕರಾರು ಮಾಡಿಕೊಂಡ ದಿನಾಂಕದಿಂದ ಲೈಸನ್ಸ್ ಅವಧಿಯು 20 ವರ್ಷಗಳಿಗೆ ಇರುತ್ತದೆ.

4. ತಿಂಗಳ ಲೈಸನ್ಸ್ ಫೀಯನ್ನು ಪ್ರತಿ ತಿಂಗಳ 5ನೇ ತಾರೀಖಿನ ಒಳಗಾಗಿ ನಗರಸಭೆಯಲ್ಲಿ ಪಾವತಿಸಿ ರಸೀದಿಯನ್ನು ಪಡೆಯತಕ್ಕದ್ದು. ಒಂದು ವೇಳೆ ಮೂರು ತಿಂಗಳವರೆಗೂ ಲೈಸನ್ಸ್ ಫೀಯನ್ನು ಪಾವತಿಸದೇ ಇದ್ದಲ್ಲಿ, ಅಂತವರ ಅಂಗಡಿಯನ್ನು ನಗರಸಭೆಯಿಂದ ಕೀಲಿ ಹಾಕಿ, ಸೀಜ್ ಮಾಡಿ, ಡಿಫಾಲ್ಟರ್ ಎಂದು ಘೋಷಿಸಿ, ಪ್ರೀಮಿಯಂ ಹಣವನ್ನು ಮುಟ್ಟುಗೋಲು ಹಾಕಿಕೊಂಡು, ಹರಾಜು ರದ್ದುಪಡಿಸಿ, ಹೊಸದಾಗಿ ಮರು-ಹರಾಜು ಮಾಡಲಾಗುವುದು.

5. ಪ್ರತಿ 3 ವರ್ಷಕ್ಕೊಮ್ಮೆ ನಿಗದಿಪಡಿಸಿದ ಲೈಸನ್ಸ್ ಫೀ ಮೇಲೆ ಶೇ. 3 ರಷ್ಟು ಹೆಚ್ಚಳ ಮಾಡಲಾಗುವುದು.

6. ಯಶಸ್ವಿ ಬಿಡ್‌ದಾರರು ಹರಾಜಾದ ಪ್ರೀಮಿಯಂ ಮೊತ್ತದ ಶೇ. 10 ರಷ್ಟು ಮೊತ್ತವನ್ನು ಅದೇ ದಿವಸ ನಗರಸಭೆಗೆ ಸಂದಾಯ ಮಾಡಿ ಪಾವತಿ ಪಡೆಯತಕ್ಕದ್ದು. ಉಳಿದ ಶೇ. 90 ರಷ್ಟು ಪ್ರೀಮಿಯಂ ಹಣವನ್ನು ಟೆಂಡರು ಮಂಜೂರಾದ ನಂತರ 15 ದಿನಗಳೊಳಗಾಗಿ ಹಣವನ್ನು ನಗರಸಭೆಗೆ ಸಂದಾಯ ಮಾಡಬೇಕು. ಕಟ್ಟಡ ಕಬ್ಜಾ ಪಡೆದುಕೊಂಡು ಕರಾರು ಪತ್ರ ಮಾಡುವ ದಿನಾಂಕದಿಂದ ಲೈಸನ್ಸ್ ಫೀ ಸಂದಾಯ ಮಾಡುವುದು ಯಶ್ವಸಿ ಬಿಡ್ ದಾರರು ಜವಾಬ್ದಾರಿಯಾಗಿರುತ್ತದೆ.

7. ಯಶಸ್ವಿ ಬಿಡ್‌ದಾರರು ರೂ. 100-00 ಮೌಲ್ಯದ ಛಾಪಾ ಕಾಗದದ ಮೇಲೆ ನಗರಸಭೆಯು ವಿಧಿಸಿದ ಯಾವತ್ತೂ ಶರತ್ತುಗಳನ್ನು ಪಾಲಿಸುವುದಾಗಿ ತಮ್ಮ ಸ್ವಂತ ಖರ್ಚಿನಲ್ಲಿ ಕರಾರು ಬರೆದುಕೊಡತಕ್ಕದ್ದು.

8. ಯಾವುದೇ ಕಾರಣಕ್ಕೂ ಮಳಿಗೆಗಳನ್ನು ಪರಭಾರೆ ಮಾಡುವ ಅಥವಾ ಒಳಕರಾರು ಮಾಡಿಕೊಡತಕ್ಕದ್ದಲ್ಲ. ಅಂತಹ ಪ್ರಸಂಗ ಕಂಡು ಬಂದಲ್ಲಿ ಶರ್ತು ಉಲ್ಲಂಘನೆ ಆಗಿದೆಯೆಂದು ಪರಿಗಣಿಸಿ ಲೈಸನ್ಸ್‌ನ್ನು ರದ್ದುಪಡಿಸಲಾಗುವುದು. ಮತ್ತು ಪ್ರೀಮಿಯಂ ಹಣವನ್ನು ಮುಟ್ಟುಗೋಲು ಹಾಕಿಕೊಂಡು, ಅಂಗಡಿಯನ್ನು ನಗರಸಭೆ ತಾಬೆಗೆ ತೆಗೆದುಕೊಳ್ಳಲಾಗುವುದು. ಹಾಗೂ ಮರು-ಹರಾಜು ಪ್ರಕ್ರಿಯೆ ಜರುಗಿಸಲಾಗುವುದು.

9. ಅಂಗಡಿ ಮಳಿಗೆಯಲ್ಲಿ ಬಳಸಿದ ವಿದ್ಯುಚ್ಛಕ್ತಿ ಬಿಲ್, ಯಶಸ್ವಿ ಬಿಡ್‌ದಾರರು, ಸಂಬಂಧಪಟ್ಟ ಇಲಾಖೆಯ ನಿಯಮಾನುಸಾರ ಭರಿಸತಕ್ಕದ್ದು.



PDF Created with deskPDF PDF Writer - Trial :: http://www.docudesk.com

10. ಯಶಸ್ವಿ ಬಿಡ್‌ದಾರರು ಲೈಸನ್ಸ್ ಪಡೆದ ಮಳಿಗೆಯಲ್ಲಿ ಯಾವುದೇ ತರಹದ ಕಾನೂನು ಬಾಹಿರ ಚುಟುವಟಿಕೆಗಳನ್ನು ಮಾಡಬಾರದು. ಅದಕ್ಕೆ ಅವರ ಸ್ವಂತ ಜವಾಬ್ದಾರಿ. ಅಂತಹ ಪ್ರಕರಣ ಕಂಡುಬಂದರೆ ಯಾವುದೇ ಸೂಚನೆ ನೀಡದೆ ಮಳಿಗೆಯನ್ನು ನಗರಸಭೆ ವಶಕ್ಕೆ ಪಡೆಯಲಾಗುವುದು.

11. ಯಶಸ್ವಿ ಬಿಡ್‌ದಾರರು ಲೈಸನ್ಸ್ ಪಡೆದ ಮಳಿಗೆಯಲ್ಲಿ ಯಾವುದೇ ತರಹದ ಬದಲಾವಣೆ, ಕಟ್ಟಡದ ಪರಿವರ್ತನೆ ಮಾಡತಕ್ಕದ್ದಲ್ಲ. ಒಂದು ವೇಳೆ ಹೆಚ್ಚಿನ ವ್ಯವಸ್ಥೆ ಅವಶ್ಯವಿದ್ದಲ್ಲಿ ನಗರಸಭೆಯಿಂದ ಅನುಮತಿ ಪಡೆದು ವ್ಯವಸ್ಥೆ ಮಾಡಿಕೊಳ್ಳಬಹುದು.

12. ಯಶಸ್ವಿ ಬಿಡ್‌ದಾರರು ನಗರಸಭೆಯ ಟ್ರೇಡ್ ಲೈಸನ್ಸ್ ಕಾಯ್ದೆಯನ್ವಯ ಲೈಸನ್ಸ್ ಪಡೆದು ವ್ಯಾಪಾರ ಉದ್ಯೋಗ ಮಾಡತಕ್ಕದ್ದು.

13. ಯಶಸ್ವಿ ಬಿಡ್‌ದಾರರು ಸರ್ಕಾರ ಮತ್ತು ನಗರಸಭೆಯು ಕಾಲ–ಕಾಲಕ್ಕೆ ವಿಧಿಸಿದ ಶರ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

14. ಟೆಂಡರು ಮತ್ತು ಹರಾಜಿನ ವಿವರವಾದ ಶರತ್ತುಗಳನ್ನು ಅರ್ಜಿ ಫಾರ್ಮಿನ ಜೊತೆಗೆ ನೀಡಲಾಗುತ್ತಿದ್ದು, ಅವುಗಳನ್ನು ಟೆಂಡರುದಾರರು ಪಾಲಿಸತಕ್ಕದ್ದು.

15. ಟೆಂಡರು ಪ್ರಕ್ರಿಯೆಯಲ್ಲಿ ನಡೆದ ಬಿಡ್ಡನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಗರಸಭೆ ಕಾದಿರಿಸಿಕೊಂಡಿದೆ.

16. ನಗರಸಭೆಗೆ ಯಾವುದೇ ತರಹದ ಬಾಕಿದಾರರಾಗಿದ್ದಲ್ಲಿ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ.

17. ಹರಾಜಿನ ದಿನದಂದು 18 ವಯಸ್ಸು ಆದವರು ಹರಾಜಿನಲ್ಲಿ ಭಾಗವಹಿಸಲು ಅರ್ಹರಿರುತ್ತಾರೆ.

| | |
|---|---|
| **(ರಮೇಶ್ ಆಚಾರಿ)** | **(ಜಿ. ರಾಮದಾಸ್)** |
| ಅಧ್ಯಕ್ಷರು, | ಪೌರಾಯುಕ್ತರು, |
| ನಗರಸಭೆ, ಶಿರಸಿ. | ನಗರಸಭೆ, ಶಿರಸಿ. |

ಪ್ರತಿಯನ್ನು ನಗರಸಭೆಯ ಸೂಚನಾ ಫಲಕದಲ್ಲಿ, ಹರಾಜು ನಡೆಯುವ ಮಳಿಗೆ ಇರುವ ಸ್ಥಳದಲ್ಲಿ ಪ್ರಚುರಪಡಿಸಲು ಹಾಗೂ ಕಛೇರಿಯ ಕಡತದಲ್ಲಿ ಕಾದಿಡಲು ನೀಡಿದೆ.



PDF Created with deskPDF PDF Writer - Trial :: http://www.docudesk.com